**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No.889/2025**
**DW: 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 10.12.2025**

**ಪಾಟೀ ಸವಾಲು : ವಾದಿಗಳ ಪರ ವಕೀಲರಾದ: ಶ್ರೀ.ಪಿ ವಿ ಎಸ್ ರವರಿಂದ**

1. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಚಿಲ್ಲರೆ ಅಂಗಡಿಯನ್ನು ನಡೆಸುತ್ತಿದ್ದೇನೆ. ಸದರಿ ಸಂಗತಿಯನ್ನು ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಮ್ಮ ಮನೆಯ ಸಂಖ್ಯೆ 310 ಆಗಿರುತ್ತದೆ. ನಮ್ಮ ಮನೆಯ ಸಂಖ್ಯೆ 309 ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮ್ಮ ಮನೆಯ ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ಪ್ರಸ್ತುತ ನನಗೆ 35 ವರ್ಷ ವಯಸ್ಸಾಗಿರುತ್ತದೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

2. ಮೃತ ವಾದಿ ರಾಜಪ್ಪ ನಮ್ಮ ದೂರದ ಸಂಬಂಧಿಯಾಗಬೇಕು. ಸದರಿ ರಾಜಪ್ಪ ಹಾಗೂ ನಮ್ಮ ತಂದೆ ಮುನಿಯಪ್ಪ ಇಬ್ಬರೂ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆಯ ಎದುರುಗಡೆ ವಾದಿಯರ ಮನೆ ಇರುತ್ತದೆ ಎಂದರೆ ಸರಿ. ವಾದಿಯರ ಮನೆಯ ಸಂಖ್ಯೆ 309 ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು, ನನ್ನ ತಂದೆ ಹಾಗೂ ನನ್ನ ಸಹೋದರ ಒಟ್ಟಿಗೆ ಲಿಖಿತ ಹೇಳಿಕೆಗೆ ನಮ್ಮ ವಕೀಲರ ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ. ನಾನು ಲಿಖಿತ ಹೇಳಿಕೆಗೆ ಇಂಗ್ಲಿಷ್‌ನ small letters ಹಾಗೂ capital letters ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಹಿಗೆ initial ಅನ್ನು ಕೊನೆಯಲ್ಲಿ ಹಾಕುತ್ತೇನೆ. ಎಮ್. ಮಂಜುನಾಥ ನನ್ನ ಅಣ್ಣನಾಗಬೇಕು. ನಮ್ಮ ಅಣ್ಣನು capital letters ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಅಣ್ಣ ಸಹಿ ಮಾಡುವ ಸಮಯದಲ್ಲಿ ನಾನು ಹಾಜರು ಇರುವುದಿಲ್ಲ. ನಮ್ಮ ತಂದೆ ತಮ್ಮ ಹೆಬ್ಬಟ್ಟಿ ಗುರುತನ್ನು ಹಾಕುವ ಸಮಯದ್ಲಿ ನಾನು ಹಾಜರಿದ್ದೆ.

3. ಮೃತ ರಾಜಪ್ಪ ಅಕ್ಷರಸ್ತರಾಗಿರುವುದಿಲ್ಲ ಕೇವಲ ಸಹಿಯನ್ನು ಮಾತ್ರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲರುವುದಿಲ್ಲ. ನನ್ನ ತಂಗಿ ಹೆಸರು ಲಕ್ಷ್ಮೀಯಾಗಿರುತ್ತದೆ. ನಿ.ಪಿ. 1 ಕ್ರಯದ ಕರಾರು ಪತ್ರಕ್ಕೆ ನಾವು ಪ್ರತಿವಾದಿಗಳು ಹಾಗೂ ನನ್ನ ತಂಗಿ ಸಹಾ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ. 1 ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ನಾನು ನಿ.ಪಿ. 1 ನ್ನು ಗಮನಿಸಿರುತ್ತೇನೆ. ನನ್ನ ತಾತನ ಹೆಸರು ಹೊಸಹಳ್ಳಿ ವೆಂಕಟರಮಣಪ್ಪ ಎಂದು ಇರುತ್ತದೆ. ನಿ.ಪಿ. 1 ಛಾಪಾ ಕಾಗದವನ್ನು ನಮ್ಮ ತಂದೆಯವರೇ ತಂದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ನಿ.ಪಿ. 1 ರ ಸ್ವತ್ತಿನ ವಿವರವು ಸರಿಯಾಗಿರುತ್ತದೆ. ದಾವಾ ಸ್ವತ್ತು ನಮ್ಮ ತಂದಗೆ ವಿಭಾಗ ಪತ್ರದ ಅನ್ವಯ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ಪ್ರಸ್ತುತ ನಮ್ಮ ತಂದೆಯವರು ಆರೋಗ್ಯವಾಗಿರುತ್ತಾರೆ ಇದಕ್ಕೂ ಮೊದಲು ಅವರ ಆರೋಗ್ಯ ಸರಿ ಇರಲಿಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಬರಲು ಯಾವುದೇ ಅನಾನುಕೂಲ ಇರುವುದಿಲ್ಲ ಎಂದರೆ ಸರಿ. ನಿ.ಪಿ. 1 ಹಾಗೂ ಲಿಖಿತ ಹೇಳಿಕೆಯಲ್ಲಿರುವ ಸಹಿಗಳು ನನ್ನದೇ ಆಗಿರುತ್ತದೆ ಎಂದರೆ ಸರಿಯಲ್ಲ. ಇಂಗ್ಲಿಷ್ capital letters ನಲ್ಲಿ ಸಹಿ ಮಾಡಿದರೇ ಗೊತ್ತಾಗುತ್ತದೆ ಎಂದು ನಾನು ಲಿಖಿತ ಹೇಳಿಕೆಯಲ್ಲಿ ಇಂಗ್ಲಿಷ್‌ನ small letters ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ. 1 ರಲ್ಲಿ 3 ಕಡೆ ನಾನು ಹಾಗೂ ನನ್ನ ಸಹೋದರನಾದ ಮಂಜುನಾಥ ಇಂಗ್ಲಿಷ್ capital letters ನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಮೃತ ವಾದಿಗೆ ಇಂಗ್ಲಿಷ್ ಹಾಗೂ ಕನ್ನಡ ಭಾಷೆಯನ್ನು ಬರೆಯಲು ಮತ್ತು ಓದಲು ಬರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಮೃತ ರಾಜಪ್ಪ ಹಾಗೂ ಇನ್ನಿತರರು ಖೊಟ್ಟಿಯಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ದಾವೆಗಳನ್ನು ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರ ವಿರುದ್ದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾವು ಮೃತ ರಾಜಪ್ಪನ ಮೇಲೆ ಖಾಸಗಿ ದೂರನ್ನು ಸಲ್ಲಿಸಿರುತ್ತೇವೆ ಆದರೆ ಸದರಿ ದೂರಿನ ವಿಚಾರಣೆ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಇರುವುದಿಲ್ಲ. ನಮ್ಮ ವಕೀಲರಿಗೆ ಮಾಹಿತಿ ಇರುತ್ತದೆ. ಯಾವ ವರ್ಷದಂದು ದೂರನ್ನು ಸಲ್ಲಿಸಿರುತ್ತೇವೆ ಎಂದು ನನಗೆ ಗೊತ್ತಿಲ್ಲ.

**ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**